Collins Aerospace

# ದತ್ತಿ ನೀಡುವಿಕೆ

ದತ್ತಿ ನೀಡುವಿಕೆಯ ಮಾರ್ಗಸೂಚಿಗಳು



Collins Aerospace ನಲ್ಲಿ ಭವಿಷ್ಯದ ಮರುವ್ಯಾಖ್ಯಾನ

ನಾವು ಇಲ್ಲಿ ಮತ್ತು ಈಗ ಏನು ಮಾಡಬಲ್ಲೆವು ಎನ್ನುವ ದೃಷ್ಟಿಯಿಂದಷ್ಟೇ ಅಲ್ಲದೆ ಜಗತ್ತಿನಾದ್ಯಂತದ ಭವಿಷ್ಯದ ಪೀಳಿಗೆಗಳ ಮೇಲೆ ನಾವು ಬೀರಬಹುದಾದ ಪ್ರಭಾವದ ದೃಷ್ಟಿಕೋನದಿಂದಲೂ ಪರಿಗಣಿಸಲು Collins Aerospace ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯ ವಿಧಾನವನ್ನು ಬದಲಾಯಿಸುತ್ತಿದೆ. ಅದನ್ನು ನಾವು ***ಭವಿಷ್ಯದ ಮರುವ್ಯಾಖ್ಯಾನ*** ಎಂದು ಕರೆಯುತ್ತೇವೆ. ಈ ದಿಟ್ಟ ಹೊಸ ವಿಧಾನವು ಸಮಾಜದ ಕೆಲವು ಕಠಿಣ ಸವಾಲುಗಳನ್ನು ಪರಿಹರಿಸುವ ನಮ್ಮ ಕಂಪನಿಯ ಬದ್ಧತೆಯನ್ನು ಸಾಕಾರಗೊಳಿಸುತ್ತದೆ.

ನಮ್ಮ ಸ್ಥಳೀಯ ಮತ್ತು ಜಾಗತಿಕ ಉಪಸ್ಥಿತಿಯನ್ನು ಹೆಚ್ಚಿಸಲು, ನಾವು ನಮ್ಮ ಸ್ವಯಂಸೇವಕತ್ವ, ನಾಗರಿಕ ನಾಯಕತ್ವ ಮತ್ತು ಸಾಂಸ್ಥಿಕ ಕೊಡುಗೆಯನ್ನು ಮೂರು ಸ್ತಂಭಗಳ ಸುತ್ತಲೂ ಜೋಡಿಸುತ್ತೇವೆ:

- *STEM ಶಿಕ್ಷಣ: ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನದಲ್ಲಿ ವೃತ್ತಿ ಅವಕಾಶಗಳನ್ನು ಪಡೆದುಕೊಳ್ಳಲು ಪ್ರಯತ್ನಿಸುವಂತೆ ನಮ್ಮ ಯುವಜನತೆಯನ್ನು ಪ್ರೇರೇಪಿಸುವುದು*
- *ಕಾರ್ಯಪಡೆಯ ಅಭಿವೃದ್ಧಿ: ನಮ್ಮ ಪ್ರಸ್ತುತ ಮತ್ತು ಭವಿಷ್ಯದ ಕಾರ್ಯಪಡೆಯಲ್ಲಿ ಹೂಡಿಕೆ ಮಾಡುವುದು*
- *Collins ಸಮುದಾಯ ಹುಮ್ಮಸ್ಸು: ಸೇರ್ಪಡೆ ಮತ್ತು ಸಮರ್ಥನೀಯ ಸಮುದಾಯಗಳನ್ನು ಅಭಿವೃದ್ಧಿಪಡಿಸುವುದು*

ಒಂದು ವೇಳೆ ನಿಮ್ಮ ಸಂಸ್ಥೆಯ ಧ್ಯೇಯವು ನಮ್ಮ ಗುರಿಯೊಂದಿಗೆ ಹೊಂದಾಣಿಕೆಯಾಗುತ್ತಿದ್ದರೆ, ಅನುದಾನಕ್ಕಾಗಿ ವಿನಂತಿ ಸಲ್ಲಿಸಲು ನಾವು ನಿಮ್ಮನ್ನು ಸ್ವಾಗತಿಸುತ್ತೇವೆ.

## ಅನುದಾನ ಮತ್ತು ಅರ್ಹತೆ

ಕಾರ್ಪೊರೇಟ್ ದೇಣಿಗೆಗಳಿಗಾಗಿ ವಿನಂತಿಯನ್ನು ನಿರಂತರ ಆಧಾರದಲ್ಲಿ ಸ್ವೀಕರಿಸಲಾಗುತ್ತದೆ. ಅನುದಾನಕ್ಕಾಗಿನ ವಿನಂತಿಗಳನ್ನು ನಿರಂತರವಾಗಿ ಪರಿಶೀಲಿಸಲಾಗುತ್ತದೆ, ಹಾಗೂ ನಿರ್ಧಾರಗಳು ಮತ್ತು ಪಾವತಿಯನ್ನು ಸಾಮಾನ್ಯವಾಗಿ ಸಲ್ಲಿಕೆಯ 60 ದಿನಗಳ ಒಳಗೆ ಮಾಡಲಾಗುತ್ತದೆ.

ದತ್ತಿ ನೀಡುವಿಕೆಯ ನಮ್ಮ ಸ್ಥಳೀಯಗೊಳಿಸಿದ ವಿಧಾನದಿಂದಾಗಿ, ನಮ್ಮ ಸಾಮಾನ್ಯ ಅನುದಾನ ಗಾತ್ರವು ಉಪಕ್ರಮದಿಂದ ಉಪಕ್ರಮಕ್ಕೆ ವ್ಯತ್ಯಾಸವಾಗುತ್ತದೆ.

ಅನುದಾನಕ್ಕಾಗಿ ಪರಿಗಣಿಸಲು, ಸಂಸ್ಥೆಯು ಈ ಕೆಳಗಿನ ಮಾನದಂಡಗಳನ್ನು ಪೂರೈಸಬೇಕು:

- ಅನುದಾನಕ್ಕಾಗಿ ವಿನಂತಿ ಸಲ್ಲಿಸಲಾಗಿರುವ ಕಾರ್ಯಕ್ರಮವು Collins Aerospace ನ ಮೂರು ಆಧಾರಸ್ತಂಭಗಳೊಂದಿಗೆ ಹೊಂದಾಣಿಕೆಯಾಗಬೇಕು.
- ಸಂಸ್ಥೆಯು Collins Aerospace ಸಮುದಾಯಕ್ಕೆ ಸೇವೆ ಒದಗಿಸಬೇಕು ಮತ್ತು Collins Aerospace ಸ್ಥಳ/ಸೈಟ್‌ನಿಂದ 50 ಮೈಲುಗಳ ಒಳಗೆ ಇರಬೇಕು.
- ಸಂಸ್ಥೆಯು ಶಾಶ್ವತವಾದ, ತೆರಿಗೆ ವಿನಾಯಿತಿ ಪಡೆದಿರುವ 501c3 ಅಥವಾ ಅದಕ್ಕೆ ಸಮನಾದ ಅಂತಾರಾಷ್ಟ್ರೀಯ ಮಾನದಂಡದ ಸಂಸ್ಥೆಯಾಗಿರಬೇಕು ಮತ್ತು ಹಿಂದಿನ ವರ್ಷದ ಹಣಕಾಸು ಲೆಕ್ಕಪತ್ರಗಳನ್ನು ಒದಗಿಸುವಂತಿರಬೇಕು. ಮಾನ್ಯತೆ ಪಡೆದಿರುವ ಶೈಕ್ಷಣಿಕ ಸಂಸ್ಥೆಗಳು ಮತ್ತು 501c3-ಹೊರತಾದ ಸರ್ಕಾರಿ ಏಜೆನ್ಸಿಗಳಿಂದಲೂ ನಾವು ವಿನಂತಿಗಳನ್ನು ಸ್ವೀಕರಿಸುತ್ತೇವೆ. ಮತ್ತಷ್ಟು ವರ್ಗೀಕರಣ ಮತ್ತು ಅರ್ಹತೆ ಆಯ್ಕೆಗಳಿಗಾಗಿ, ದಯವಿಟ್ಟು causes.benevity.org ಇಲ್ಲಿ ನಮ್ಮ ಅನುದಾನ ನಿರ್ವಹಣೆಯ ವೇದಿಕೆಯನ್ನು ಪರಿಶೀಲಿಸಿ ಅಥವಾ causes@benevity.org ಗೆ ಇಮೇಲ್ ಮಾಡಿ.
- ಸಂಸ್ಥೆಯು ಖಾಸಗಿ ಫೌಂಡೇಶನ್ ಅಲ್ಲ.
- Collins Aerospace ನ ಪ್ರಸ್ತುತ ಅಥವಾ ಹಿಂದಿನ ಉದ್ಯೋಗಿಯ ತೊಡಗಿಕೊಳ್ಳುವಿಕೆಯನ್ನು ನಿರೀಕ್ಷಿಸುತ್ತೇವೆ ಆದರೆ ಇದು ಅಗತ್ಯವಲ್ಲ (ಉದಾಹರಣೆಗೆ, ಆಡಳಿತಮಂಡಳಿ ಸದಸ್ಯ, ಸ್ವಯಂಸೇವಕ, ಮಾರ್ಗದರ್ಶಕ, ಇತ್ಯಾದಿ).

ಈ ಕೆಳಗಿನ ಉದ್ದೇಶಗಳಿಗಾಗಿ ಅನುದಾನವನ್ನು **ಪರಿಗಣಿಸುವುದಿಲ್ಲ** :

- ಸ್ಮಾರಕಗಳು, ದತ್ತಿ ನೀಡುವಿಕೆ ಮತ್ತು ವಾರ್ಷಿಕ ಅಭಿಯಾನಗಳು
- ವ್ಯಕ್ತಿಗಳು ಅಥವಾ ಕುಟುಂಬಗಳಿಗೆ ಪ್ರಯೋಜನ ತಂದುಕೊಡುವ ವಿನಂತಿಗಳು
- ವೃತ್ತಿಪರ ಜೊತೆಗಾರಿಕೆಗಳು, ಸೋದರ ಸಂಬಂಧ, ಕಾರ್ಮಿಕ ಅಥವಾ ಸಾಮಾಜಿಕ ಸಂಘಟನೆಗಳು
- ಕ್ರೀಡಾ ತಂಡಗಳು, ಕ್ರೀಡಾ ಈವೆಂಟ್‌ಗಳು, ಕ್ರೀಡಾ ಬಂಡವಾಳ
- ಕ್ರೀಡಾಪಟುಗಳಿಗೆ ನಿಯೋಜಿತವಾಗಿರುವ ಅಭಿಯಾನಗಳು ಮತ್ತು ಸ್ಕಾಲರ್‌ಶಿಪ್‌ಗಳು
- ಉಡುಗೊರೆಗಳು, ಡ್ರಾ ಅಥವಾ ಟಿಕೆಟ್ ಮಾರಾಟದ ಮೂಲಕ ನೀಡುವ ಬಹುಮಾನಗಳು
- ರಾಜಕೀಯ ಅಭ್ಯರ್ಥಿಗಳು, ಅಭಿಯಾನಗಳು ಅಥವಾ ಸಂಘಟನೆಗಳು
- ಧಾರ್ಮಿಕ ಉದ್ದೇಶಗಳಿಗಾಗಿ ನಂಬಿಕೆ ಆಧರಿತ ಸಂಘಟನೆಗಳು
- ಹಣಕಾಸಿನ ಕೊರತೆಯನ್ನು ಸರಿದೂಗಿಸಿಕೊಳ್ಳುವಿಕೆ
- ಜನಾಂಗ, ಜನಾಂಗೀಯತೆ, ಬಣ್ಣ, ಧರ್ಮ, ಲೈಂಗಿಕ ದೃಷ್ಟಿಕೋನ, ಲಿಂಗ ಗುರುತಿಸುವಿಕೆ, ಲಿಂಗ ಅಭಿವ್ಯಕ್ತಿ, ವಯಸ್ಸು, ರಾಷ್ಟ್ರೀಯ ಮೂಲ, ಅಂಗವೈಕಲ್ಯ ಅಥವಾ ಅನುಭವಿ ಸ್ಥಾನಮಾನದ ಆಧಾರದ ಮೇಲೆ ತಾರತಮ್ಯ ಮಾಡುವ ಸಂಸ್ಥೆಗಳು.

Collins Aerospace ಸಾಮಾನ್ಯವಾಗಿ ನಮ್ಮ ವಾರ್ಷಿಕ ದತ್ತಿ ನೀಡುವಿಕೆ ಕಾರ್ಯಕ್ರಮದ ಬಜೆಟ್ ಸಂದರ್ಭ ಅನುದಾನದ ವಿನಂತಿಗಳನ್ನು ಸ್ವೀಕರಿಸುವ ಕಾರಣ, ನಮ್ಮ ನೀಡುವಿಕೆ ಕಾರ್ಯನೀತಿಗಳು ಮತ್ತು ಮಾರ್ಗಸೂಚಿಗಳೊಂದಿಗೆ ಅತ್ಯುತ್ತಮವಾಗಿ ಹೊಂದಾಣಿಕೆಯಾಗುವ ಯೋಗ್ಯ ಸಂಸ್ಥೆಗಳು ಮತ್ತು ಕಾರ್ಯಕ್ರಮಗಳಿಗೆ ಬೆಂಬಲ ನೀಡುವುದನ್ನು ನಾವು ಆದ್ಯತೆಗೊಳಿಸಬೇಕಾಗುತ್ತದೆ. ನಾವು ಈ ಹಿಂದೆ ಬೆಂಬಲಿಸಿರುವ ಸಂಸ್ಥೆಗಳಿಗೆ ಬೆಂಬಲವನ್ನು ಕಡಿಮೆ ಮಾಡಲು ಕೂಡ ನಾವು ನಿರ್ಧರಿಸಬಹುದು, ಇದರಿಂದಾಗಿ ಇತರ ಸಮುದಾಯಗಳೊಂದಿಗೆ ತೊಡಗಿಕೊಳ್ಳುವ ನಿಟ್ಟಿನಲ್ಲಿ ನಾವು ಅನ್ವೇಷಿಸಬಹುದು.

Collins Aerospace ನ ಬೆಂಬಲವು ಶಾಶ್ವತವಾಗಿ ಉಳಿಯುತ್ತದೆ ಎಂದು ನಿರೀಕ್ಷಿಸಬಾರದು ಮತ್ತು ಹಣಕಾಸಿನ ವಿನಂತಿಗಳ ನಿರಾಕರಣೆಯು ಸಂಸ್ಥೆಯ ಋಣಾತ್ಮಕ ಮೌಲ್ಯಮಾಪನ ಅಥವಾ ಅದರ ಕಾರ್ಯಕ್ರಮಗಳು ಮತ್ತು ಸೇವೆಗಳ ಮೌಲ್ಯವನ್ನು ಪ್ರತಿಬಿಂಬಿಸುವುದಿಲ್ಲ.

## ಸಂಸ್ಥೆಗಳು ಒದಗಿಸಬೇಕಾದ ಮಾಹಿತಿ

ಅನುದಾನ ವಿನಂತಿಯನ್ನು ಪೂರ್ಣಗೊಳಿಸಲು, ನೀವು ನಿಮ್ಮ ಸಂಸ್ಥೆಯ ಕುರಿತು ವಿವರಗಳನ್ನು ಒದಗಿಸಬೇಕಾಗುತ್ತದೆ, ಉದಾಹರಣೆಗೆ:

- ಮಿಷನ್, ದೃಷ್ಟಿ, ನಾಯಕತ್ವ (ನಿಮ್ಮ ಅಧಿಕಾರಿಗಳು ಮತ್ತು ಮಂಡಳಿಯ ಸಂಪೂರ್ಣ ಕಾನೂನು ಹೆಸರುಗಳು) ಸಂಯೋಜನೆ, ವಾರ್ಷಿಕ ಬಜೆಟ್.
- ಅದೇ ಸಮಸ್ಯೆಗೆ ಸಂಬಂಧಿಸಿ ಕಾರ್ಯನಿರ್ವಹಿಸುತ್ತಿರುವ ಇತರ ಸಂಸ್ಥೆಗಳಿಗಿಂತ ನಿಮ್ಮ ಸಂಸ್ಥೆ ಹೇಗೆ ಭಿನ್ನವಾಗಿದೆ.
- Collins Aerospace ಮತ್ತು ನಮ್ಮ ಮಾತೃಸಂಸ್ಥೆ, Raytheon Technologies ನಿಂದ ಅನುದಾನ ಸ್ವೀಕರಿಸಿದ ಇತಿಹಾಸ
- ಒಂದು ವೇಳೆ ಅನ್ವಯಿಸುವುದಾದರೆ, ನಿಮ್ಮ ಸಂಘಟನೆಯಲ್ಲಿ ತೊಡಗಿಕೊಂಡಿರುವ Collins Aerospace ಉದ್ಯೋಗಿಯ(ಗಳ) ಸಂಪರ್ಕ ಹೆಸರು

ನೀವು ನಿಮ್ಮ ಅನುದಾನ ವಿನಂತಿಯ ಕುರಿತಾಗಿಯೂ ಮಾಹಿತಿಯನ್ನು ಒದಗಿಸಬೇಕಾಗುತ್ತದೆ, ಉದಾಹರಣೆಗೆ:

- ಪ್ರಾಜೆಕ್ಟ್ ಉದ್ದೇಶ, ಗುರಿಗಳು ಮತ್ತು ಅನುದಾನ ಯಾಕೆ ಅಗತ್ಯವಿದೆ ಎನ್ನುವುದು ಸೇರಿದಂತೆ ವಿವರವಾದ ಪ್ರಾಜೆಕ್ಟ್ ವಿವರಣೆ.
- ಅನುದಾನ ಯಾವಾಗ ಬೇಕು ಎನ್ನುವುದು ಸೇರಿದಂತೆ, ಪ್ರಾಜೆಕ್ಟ್ ದಿನಾಂಕಗಳು
- ನೀವು ಸೇವೆ ಒದಗಿಸುವ ಪ್ರೇಕ್ಷಕರು ಅಥವಾ ಜನಸಮುದಾಯವನ್ನು ವಿವರಿಸಿ.
- ಈ ಪ್ರಾಜೆಕ್ಟ್‌ನಿಂದ ವರ್ಷಕ್ಕೆ ನೇರವಾಗಿ ಪ್ರಯೋಜನ ಪಡೆಯುವ ವ್ಯಕ್ತಿಗಳ ಸಂಖ್ಯೆ
- Collins Aerospace ಉದ್ಯೋಗಿಗಳಿಗೆ ನಿಮ್ಮ ಸಂಸ್ಥೆ ಅಥವಾ ಪ್ರಾಜೆಕ್ಟ್ ಒದಗಿಸುವ ಸ್ವಯಂಸೇವೆಯ ಅವಕಾಶಗಳು
- ಪ್ರಾಜೆಕ್ಟ್‌ನ ಮಾಪನ ಮಾಡಬಹುದಾದ ಫಲಿತಾಂಶಗಳು
- Collins Aerospace ಅನ್ನು ಗುರುತಿಸುವ ನಿರ್ದಿಷ್ಟ ಗೋಚರತೆ ಅವಕಾಶಗಳು ಅಥವಾ ಮಾರ್ಗಗಳನ್ನು ಪಟ್ಟಿ ಮಾಡಿ.
- ನೀವು ಜೊತೆಯಾಗಿ ಕೆಲಸ ಮಾಡುವ ಸಮುದಾಯ ಪಾಲುದಾರರನ್ನು ಪಟ್ಟಿ ಮಾಡಿ ಮತ್ತು ಪ್ರತಿ ಪಾಲುದಾರರ ಪಾತ್ರವನ್ನು ವಿವರಿಸಿ.
- ನೀವು ಸ್ವೀಕರಿಸಿರುವ ಇತರ ಎಲ್ಲ ಅನುದಾನ ಮೂಲಗಳ ಕುರಿತು ವಿವರಗಳನ್ನು ಒದಗಿಸಿ.

ನಿಮ್ಮ ಸಂಸ್ಥೆಗೆ ಸಂಬಂಧಿಸಿದ ಕೆಲವು ದಾಖಲೆಗಳನ್ನು ಸಲ್ಲಿಸುವಂತೆ ಕೂಡ ನಾವು ನಿಮ್ಮನ್ನು ಕೇಳುತ್ತೇವೆ, ಅದರಲ್ಲಿ ಈ ಕೆಳಗಿನವು ಸೇರಿರಬಹುದು (ಆದರೆ ಇಷ್ಟಕ್ಕೆ ಸೀಮಿತವಾಗಿರುವುದಿಲ್ಲ):

- **U.S.-ನಲ್ಲಿ ನೆಲೆಸಿರುವ ಸಂಸ್ಥೆಗಳಿಗೆ**: ನಿಮ್ಮ W-9 ನಮೂನೆ, IRS ನಿರ್ಧರಿಸುವಿಕೆ ಪತ್ರ, 990 ನಮೂನೆ, ವಾರ್ಷಿಕ ವರದಿ, ಕಾರ್ಯಕ್ರಮ/ಈವೆಂಟ್‌ನ ಬ್ರೋಷರ್, ಇತ್ಯಾದಿ.
- **ಭಾರತದಲ್ಲಿ ನೆಲೆಸಿರುವ ಸಂಸ್ಥೆಗಳಿಗೆ**: ವಿವರಗಳು ಮಾರ್ಚ್ 2022 ರಲ್ಲಿ ಲಭ್ಯವಾಗುತ್ತವೆ.
- **U.S. ಮತ್ತು ಭಾರತದ ಹೊರಗೆ ನೆಲೆಸಿರುವ ಸಂಸ್ಥೆಗಳಿಗೆ**: ನಿಮ್ಮ ದತ್ತಿಯ ಸ್ಥಿತಿಯನ್ನು ದೃಢೀಕರಿಸುವ ಅಧಿಕೃತ ಸರ್ಕಾರಿ ದಾಖಲೆ, ವಾರ್ಷಿಕ ವರದಿ, ಕಾರ್ಯಕ್ರಮ/ಈವೆಂಟ್ ಬ್ರೋಷರ್ ಇತ್ಯಾದಿ.

## ಅರ್ಜಿ ಸಲ್ಲಿಸುವುದು ಹೇಗೆ

2022 ರಿಂದ, ಕಂಪನಿಯ ದತ್ತಿ ಕೊಡುಗೆಗಳನ್ನು ಮೇಲ್ವಿಚಾರಣೆ ಮಾಡುವುದಕ್ಕಾಗಿ Benevity ಸಂಸ್ಥೆಯ Versaic ಸಿಸ್ಟಂ ಅನ್ನು ಉದ್ಯಮ-ಅನುಮೋದಿತ ತಂತ್ರಜ್ಞಾನ ಪರಿಹಾರವಾಗಿ ಬಳಸಲು ಆ ಸಂಸ್ಥೆಯೊಂದಿಗೆ ಪಾಲುದಾರಿಕೆಗಾಗಿ Collins Aerospace ನಮ್ಮ ಮಾತೃಸಂಸ್ಥೆ, Raytheon Technologies, ಮತ್ತು ನಮ್ಮ ಇತರ ವಿಭಾಗ ವ್ಯವಹಾರಗಳ ಜೊತೆಗೂಡಿತು.

ಪರಿಗಣಿಸುವುದಕ್ಕಾಗಿ ಎಲ್ಲ ಅನುದಾನ ವಿನಂತಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬೇಕು.

ಒಂದು ವೇಳೆ ನೀವು ಕಾರ್ಯಕ್ರಮ, ಪ್ರಾಜೆಕ್ಟ್ ಅಥವಾ ಈವೆಂಟ್ ಪ್ರಾಯೋಜಕತ್ವಕ್ಕಾಗಿ ಅನುದಾನಗಳಿಗೆ ವಿನಂತಿ ಸಲ್ಲಿಸುತ್ತಿರುವ ಲಾಭರಹಿತ ಸಂಸ್ಥೆಯಾಗಿದ್ದರೆ, Collins Aerospace ದತ್ತಿ ನೀಡುವಿಕೆ ವಿನಂತಿ ಪೂರ್ಣಗೊಳಿಸುವುದಕ್ಕೆ ಮೊದಲು ನೀವು Benevity Causes Portal ನಲ್ಲಿ ನೋಂದಾಯಿಸಿಕೊಳ್ಳಬೇಕು. ದಯವಿಟ್ಟು Benevity's Causes Portal ನ ಮಾಹಿತಿಯನ್ನು ಕೆಳಗೆ ನೋಡಿ.

ಒಮ್ಮೆ ಲಾಭರಹಿತ ಸಂಸ್ಥೆಯನ್ನು Benevity's Causes Portalನಲ್ಲಿ ನೋಂದಾಯಿಸಿದ ಬಳಿಕ, ದತ್ತಿ ನೀಡುವಿಕೆ ವಿನಂತಿಯನ್ನು ಪೂರ್ಣಗೊಳಿಸುವ ಮತ್ತು ಸಲ್ಲಿಸುವ ಮೂಲಕ ನೀವು ಅನುದಾನಕ್ಕಾಗಿ ಅರ್ಜಿ ಸಲ್ಲಿಸಬಹುದು.

- ಒಂದು ವೇಳೆ ನೀವು **ಈಗಾಗಲೇ Collins Aerospace ಸಮುದಾಯ ಪಾಲುದಾರರಾಗಿದ್ದರೆ**, ನೀವು ನಮ್ಮ ದತ್ತಿ ನೀಡುವಿಕೆ ವಿನಂತಿ ನಮೂನೆಗೆ ವಿಶೇಷ ಆಹ್ವಾನ ಲಿಂಕ್ ಮತ್ತು ಕೋಡ್ ಅನ್ನು ಸ್ವೀಕರಿಸಿರುತ್ತೀರಿ. ವಿಶೇಷ ಆಹ್ವಾನ ಲಿಂಕ್ ಮತ್ತು ಕೋಡ್ ಸ್ವೀಕರಿಸಲು ದಯವಿಟ್ಟು Collins ಸೈಟ್ ಸಂಪರ್ಕವನ್ನು(ಗಳನ್ನು) ಸಂಪರ್ಕಿಸಿ.

- ಒಂದು ವೇಳೆ ನೀವು **U.S.-ನಲ್ಲಿ ನೆಲೆಸಿರುವ ಸಂಸ್ಥೆಯಾಗಿದ್ದು** ಮತ್ತು ಇನ್ನೂ Collins Aerospace ಪಾಲುದಾರರಾಗಿಲ್ಲದಿದ್ದರೆ, ನಮ್ಮ U.S. ಆ್ಯಡ್-ಹಾಕ್ ದತ್ತಿ ನೀಡುವಿಕೆ ಕಾರ್ಯಕ್ರಮಕ್ಕೆ ಅರ್ಜಿ ಸಲ್ಲಿಸಲು ನಾವು ನಿಮ್ಮನ್ನು ಸ್ವಾಗತಿಸುತ್ತೇವೆ. ದತ್ತಿ ನೀಡುವಿಕೆ ವಿನಂತಿ ನಮೂನೆಯನ್ನು ಆ್ಯಕ್ಸೆಸ್ ಮಾಡಲು ಮತ್ತು ಭರ್ತಿ ಮಾಡಲು, ದಯವಿಟ್ಟು ಈ ಕೆಳಗಿನ ಲಿಂಕ್ ಮತ್ತು ಕೋಡ್ ಬಳಸಿ:
  - ದತ್ತಿ ನೀಡುವಿಕೆ ವಿನಂತಿಗೆ ಲಿಂಕ್: https://rtx.versaic.com/
  - ಒಮ್ಮೆ ನೀವು ಲಾಗಿನ್ ಮಾಡಿದ ಬಳಿಕ, ದತ್ತಿಗಾಗಿ ವಿನಂತಿಯನ್ನು ಭರ್ತಿ ಮಾಡುವುದಕ್ಕೆ ಮುನ್ನ ಒಂದು ಆಹ್ವಾನ ಲಿಂಕ್ ಒದಗಿಸುವಂತೆ ನಿಮ್ಮನ್ನು ಕೇಳಲಾಗುತ್ತದೆ. ದಯವಿಟ್ಟು ಇದನ್ನು ಬಳಸಿ: Collins_US_AdHoc22

- ಒಂದು ವೇಳೆ ನೀವು **US ಹೊರಗಿನವರಾಗಿದ್ದು** ಮತ್ತು ಇನ್ನೂ Collins Aerospace ಪಾಲುದಾರರಾಗಿಲ್ಲದಿದ್ದರೆ, ನಮ್ಮ ಜಾಗತಿಕ ಆ್ಯಡ್-ಹಾಕ್ ದತ್ತಿ ನೀಡುವಿಕೆ ಕಾರ್ಯಕ್ರಮಕ್ಕೆ ಅರ್ಜಿ ಸಲ್ಲಿಸುವಂತೆ ನಾವು ನಿಮ್ಮನ್ನು ಸ್ವಾಗತಿಸುತ್ತೇವೆ. ಈ ಜಾಗತಿಕ ದತ್ತಿ ನೀಡುವಿಕೆ ವಿನಂತಿಯನ್ನು ಆ್ಯಕ್ಸೆಸ್ ಮಾಡಲು, ದಯವಿಟ್ಟು ಈ ಕೆಳಗಿನ ಲಿಂಕ್ ಮತ್ತು ಕೋಡ್ ಬಳಸಿ:
  - ದತ್ತಿ ನೀಡುವಿಕೆ ವಿನಂತಿಗೆ ಲಿಂಕ್: https://rtx.versaic.com/
  - ಒಮ್ಮೆ ನೀವು ಲಾಗಿನ್ ಮಾಡಿದ ಬಳಿಕ, ದತ್ತಿಗಾಗಿ ವಿನಂತಿಯನ್ನು ಭರ್ತಿ ಮಾಡುವುದಕ್ಕೆ ಮುನ್ನ ಒಂದು ಆಹ್ವಾನ ಲಿಂಕ್ ಒದಗಿಸುವಂತೆ ನಿಮ್ಮನ್ನು ಕೇಳಲಾಗುತ್ತದೆ. ದಯವಿಟ್ಟು ಇದನ್ನು ಬಳಸಿ: Collins_Global_AdHoc22

- ಒಂದು ವೇಳೆ ನೀವು **ಭಾರತದಲ್ಲಿ ನೆಲೆಸಿರುವ ಸಂಸ್ಥೆಯಾಗಿದ್ದರೆ**, ಕಾರ್ಯಕ್ರಮ ವಿವರಗಳು ಮಾರ್ಚ್ 2022 ರಲ್ಲಿ ಲಭ್ಯವಾಗುತ್ತವೆ.

ನಮ್ಮ ಪರಿಶೀಲನೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ ಬಳಿಕ, ಪರಿಶೀಲನೆಯ ಫಲಿತಾಂಶದ ಕುರಿತು ಅರ್ಜಿದಾರರಿಗೆ ತಿಳಿಸಲಾಗುತ್ತದೆ. ಪ್ರಸ್ತಾವನೆಗಳ ತಾಂತ್ರಿಕ ವಿಮರ್ಶೆಗಳನ್ನು ನೀಡಲು ನಮಗೆ ಸಾಧ್ಯವಾಗುವುದಿಲ್ಲ ಎನ್ನುವುದನ್ನು ದಯವಿಟ್ಟು ಗಮನಿಸಿ. ಪರಿಶೀಲನೆ ಮತ್ತು ನಿರ್ಧಾರ ಕೈಗೊಳ್ಳುವಿಕೆಯ ಸಂಪೂರ್ಣ ಪ್ರಕ್ರಿಯೆಗೆ 60 ದಿನಗಳವರೆಗೆ ಸಮಯ ತೆಗೆದುಕೊಳ್ಳಬಹುದು.

ಒಂದು ವೇಳೆ ಅನುದಾನ ಅನುಮೋದಿತವಾದರೆ ಮತ್ತು $50,000 ಕ್ಕಿಂತ ಹೆಚ್ಚು ಅನುದಾನ ನೀಡಿದರೆ, ನೀವು ದೇಣಿಗೆ/ಅನುದಾನ ಒಪ್ಪಂದಕ್ಕೆ ಬದ್ಧರಾಗಬೇಕಾಗುತ್ತದೆ, ಇದನ್ನು Collins ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ತಂಡವು ನಿಮ್ಮ ಸಹಿಗಾಗಿ ಕಳುಹಿಸುತ್ತದೆ.

**ದತ್ತಿ ನೀಡುವಿಕೆ ವಿನಂತಿಯನ್ನು ಸಲ್ಲಿಸುವಾಗ ಇವುಗಳನ್ನು ಗಮನದಲ್ಲಿ ಇರಿಸಿಕೊಳ್ಳಿ:**

- ಒಂದು ವೇಳೆ ನೀವು ದತ್ತಿ ನೀಡುವಿಕೆ ವಿನಂತಿ ನಮೂನೆಗೆ ಲಿಂಕ್ ಅನ್ನು ಮೊದಲ ಬಾರಿಗೆ ಪ್ರವೇಶಿಸುತ್ತಿದ್ದರೆ, "Create new account" ಮೇಲೆ ಕ್ಲಿಕ್ ಮಾಡುವ ಮೂಲಕ ದಯವಿಟ್ಟು ಹೊಸ ಖಾತೆಯನ್ನು ರಚಿಸಿ.
- ಒಂದು ವೇಳೆ ನೀವು ಪುನರಾವರ್ತಿತ ಅರ್ಜಿದಾರರಾಗಿದ್ದರೆ, ಲಾಗಿನ್ ಮಾಡಲು ನಿಮ್ಮ ಬಳಕೆದಾರನ ಹೆಸರು ಮತ್ತು ಪಾಸ್‌ವರ್ಡ್ ನಮೂದಿಸಿ.

# ದತ್ತಿ



## Benevity Causes ಪೋರ್ಟಲ್ ಮತ್ತು ನಿಮ್ಮ ಸಂಸ್ಥೆಯನ್ನು ನೋಂದಾಯಿಸುವುದು

ಈ Benevity Causes Portal ನಲ್ಲಿ ಲಾಭರಹಿತ ಸಂಸ್ಥೆಗಳನ್ನು Raytheon Technologies ಮತ್ತು ಅದರ ವಿಭಾಗ ವ್ಯವಹಾರಗಳ ದತ್ತಿ ನೀಡುವಿಕೆ ಮಾರ್ಗಸೂಚಿಗಳ ಅನುಸಾರ ಜಾಗರೂಕ ಪರಿಶೀಲನೆ ಮಾಡಲಾಗುತ್ತದೆ ಮತ್ತು ಕಾರಣದ ಪ್ರೊಫೈಲ್ ಒದಗಿಸಬಲ್ಲದು, ಸ್ವಯಂ-ಪ್ರಮಾಣಪತ್ರ ಘೋಷಣೆಯನ್ನು ಪೂರ್ಣಗೊಳಿಸಬಲ್ಲದು, ನಿಮ್ಮ ಆದ್ಯತೆಯ ಪಾವತಿ ಮಾಹಿತಿಗೆ ಸೈನ್ ಅಪ್ ಮಾಡಬಲ್ಲದು ಮತ್ತು ಸಂಭಾವ್ಯ ಅನುದಾನ ನೀಡುವವರಿಗಾಗಿ ಪ್ರಭಾವಶಾಲಿ ಕಾರ್ಯಗಳ ವರದಿಯನ್ನು ಸೇರಿಸಬಲ್ಲದು.

ಈ Benevity Causes Portal ನಲ್ಲಿ ನಿಮ್ಮ ಲಾಭರಹಿತ ಸಂಸ್ಥೆಯನ್ನು ನೋಂದಾಯಿಸಿಕೊಳ್ಳುವ ಮೂಲಕ, ಎಲ್ಲ Benevity ಯ ಕ್ಲೈಂಟ್‌ಗಳಿಂದ ಅನುದಾನಗಳನ್ನು ಸ್ವೀಕರಿಸಲು, ಪ್ರತಿ ತಿಂಗಳು ದೇಣಿಗೆ ವಿವರಗಳನ್ನು ರಫ್ತು ಮಾಡಲು, ಮತ್ತು ನಿಮ್ಮ ಲಾಭರಹಿತ ಸಂಸ್ಥೆಯ ಧ್ಯೇಯ ಮತ್ತು ಪ್ರಭಾವದ ಕುರಿತು ಮಾಹಿತಿಯನ್ನು ಸೇರಿಸಲು ನಿಮಗೆ ಸಾಧ್ಯವಾಗುತ್ತದೆ.

Benevity Causes ನೊಂದಿಗೆ ನೋಂದಾಯಿಸುವ ಮತ್ತು ನಿಮ್ಮ ಪ್ರೊಫೈಲ್ ರಚಿಸುವ ಕುರಿತು ಇಲ್ಲಿ ಇನ್ನಷ್ಟು ತಿಳಿದುಕೊಳ್ಳಿ. ನೋಂದಾಯಿಸಲು ಒಂದು ವೇಳೆ ನಿಮಗೆ ಸಹಾಯ ಬೇಕಿದ್ದಲ್ಲಿ, ದಯವಿಟ್ಟು ಸೈಟ್‌ನಲ್ಲಿ how to register and claim your profile ಅನ್ನು ನೋಡಿ ಅಥವಾ ಇಲ್ಲಿ. ಬೆಂಬಲ ವಿನಂತಿಯನ್ನು ಸಲ್ಲಿಸಿ

ಒಂದು ವೇಳೆ Benevity ಮತ್ತು Causes Portal ಕುರಿತು ನಿಮ್ಮಲ್ಲಿ ಯಾವುದೇ ಪ್ರಶ್ನೆಗಳಿದ್ದರೆ ಅಥವಾ ಯಾವುದೇ ಬೆಂಬಲ ಅಗತ್ಯವಿದ್ದರೆ, ದಯವಿಟ್ಟು Benevity Resource Hub ಗೆ ಭೇಟಿ ನೀಡಿ ಅಥವಾ Benevity Causes Team ಅನ್ನು causes@benevity.org. ಇಲ್ಲಿ ಸಂಪರ್ಕಿಸಿ

## ಪ್ರಶ್ನೆಗಳಿವೆಯೇ?

ಒಂದು ವೇಳೆ ನಿಮ್ಮಲ್ಲಿ ಹೆಚ್ಚುವರಿ ಪ್ರಶ್ನೆಗಳಿದ್ದರೆ, ದಯವಿಟ್ಟು Collins Aerospace ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ತಂಡವನ್ನು CorporateSocialResponsibility@collins.com ಇಲ್ಲಿ ಸಂಪರ್ಕಿಸಿ

© 2022 Collins Aerospace, a Raytheon Technologies company. ಎಲ್ಲಾ ಹಕ್ಕುಗಳನ್ನೂ ಕಾಯ್ದಿರಿಸಲಾಗಿದೆ